**C**

**CCE PR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 27. 06. 2019 ] **ಸಂಕೇತ ಸಂಖ್ಯೆ : 33-K**

Date : 27. 06. 2019 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರು ಏನೆಂದು ಖ್ಯಾತರಾಗಿದ್ದಾರೆ ? | |
| | ***ಉತ್ತರ :*** | |
| | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರು 'ರಂಗ ಜಂಗಮ'ರೆಂದು ಖ್ಯಾತರಾಗಿದ್ದಾರೆ. | |
| 2. | ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ? | |
| | ***ಉತ್ತರ :*** | |
| | ದೇಶದ ಉದ್ಧಾರ ಅಸಿ ಮಸಿ ಕೃಷಿಯನ್ನು ಅವಲಂಬಿಸಿದೆಯೆಂದು ಲೇಖಕರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಸಸ್ತನಿಗಳ ಆಶ್ರಯದಾಣಗಳು ಯಾವುವು ?<br>*ಉತ್ತರ :*<br>ಗುಹೆ, ಪೊಟರೆ, ಗೂಡು, ಬಿಲ ಇವು ಸಸ್ತನಿಗಳ ಆಶ್ರಯದಾಣಗಳಾಗಿವೆ. | |
| 4. | ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?<br>*ಉತ್ತರ :*<br>ವಿದ್ಯಾರ್ಥಿಗಳು ಕಾಫೀ ಕುಡಿಯಲು ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು. | |
| 5. | ಲಂಡನ್ ವಿಶ್ವವಿದ್ಯಾಲಯದ ಮುಂದೆ ಗಾಂಧೀಜಿಯವರ ಪ್ರತಿಮೆಯನ್ನು ಏಕೆ ಸ್ಥಾಪಿಸಲಾಗಿದೆ ?<br>*ಉತ್ತರ :*<br>ಲಂಡನ್ ವಿಶ್ವವಿದ್ಯಾಲಯದಲ್ಲಿ ಗಾಂಧೀಜಿ ಓದಿದ್ದ ಕಾರಣ ಅವರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. | |
| 6. | ಗೋಪಾಲನಿಗೆ ಬಣ್ಣಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?<br>*ಉತರ :*<br>ಗೋಪಾಲನಿಗೆ ಬಣ್ಣಬಣ್ಣದ ಹೂಗಳು ಸಾವಿರಾರು ಮಳೆಬಿಲ್ಲು (ಕಾಮನಬಿಲ್ಲು)ಗಳು ಸೇರಿ ಕುಣಿದಂತೆ ಕಾಣಿಸುತ್ತಿದ್ದವು. | |
| 7. | ಗೋಪಾಲನು ಶಾಲೆಯಿಂದ ಮರಳುವಾಗ ಏಕೆ ಭಯಪಡುತ್ತಿದ್ದನು ?<br>*ಉತ್ತರ :*<br>ಗೋಪಾಲನು ಶಾಲೆಯಿಂದ ಮರಳುವಾಗ ಕತ್ತಲಾದುದು ಮತ್ತು ಕಾಡು ದಾಟಿ ಬರಬೇಕಾದುದರಿಂದ ಭಯಪಡುತ್ತಿದ್ದನು. | |
| 8. | ಗೋಪಾಲನ ಗೆಳೆಯರ ಹೆಸರೇನು ?<br>*ಉತ್ತರ :*<br>ಗೋಪಾಲನ ಗೆಳೆಯರು ರಾಮು, ಕಿಟ್ಟಿ, ನಾಣಿ ಮತ್ತು ಮಾಧು. | |
| 9. | ಏಣಿಗೆ ಬೀಳುವ ಭಯವಿಲ್ಲ ಏಕೆ ?<br>*ಉತ್ತರ :*<br>ಆನೆ ಭಾರ ಹೊತ್ತು ಗಟ್ಟಿ ನೆಲದಲ್ಲಿ ಕಾಲೂರಿನಿಂತ ಏಣಿಗೆ ಬೀಳುವ ಭಯವಿಲ್ಲ. | |
| 10. | ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು ?<br>*ಉತ್ತರ :*<br>ಸಿದ್ಧಾರ್ಥನು ತಪಸ್ಸಿಗಿಂತ ಜೀವಪ್ರೀತಿ ದೊಡ್ಡದೆಂದು ತಿಳಿದು ಪ್ರೀತಿಯನ್ನು ಹುಡುಕಿಕೊಂಡು ನಾಡಿನತ್ತ ಹೊರಟನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?<br>***ಉತ್ತರ :***<br>ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ. | |
| 12. | ತಿಮಿರಕ್ಕೆ ವೈರಿ ಯಾವುದು ?<br>***ಉತ್ತರ :***<br>ತಿಮಿರಕ್ಕೆ ವೈರಿ ದೀಪ. | |
| 13. | ಅಡಿಗರು ಹಗಲಿರುಳು ಯಾವುದಕ್ಕಾಗಿ ಹೋರಾಡಬೇಕೆಂದು ಹೇಳಿದ್ದಾರೆ ?<br>***ಉತ್ತರ :***<br>ಅಡಿಗರು ಹಗಲಿರುಳು ಒಂದೇ ಹೆಗ್ಗುರಿಯ ಸಾಧನೆಗಾಗಿ ಹೋರಾಡಬೇಕೆಂದು ಹೇಳಿದ್ದಾರೆ. | |
| 14. | ಕುಣಿಗಲ್ ಕೆರೆ ಯಾವ ದಿಕ್ಕಿನಲ್ಲಿದೆ ?<br>***ಉತ್ತರ :***<br>ಕುಣಿಗಲ್ ಕೆರೆ ಮೂಡಣ ದಿಕ್ಕಿನಲ್ಲಿದೆ. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | 15 × 2 = 30 |
| 15. | ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು ?<br>***ಉತ್ತರ :***<br>ಶುಭ್ರವಾದ ಬಿಳಿಯ ಉದ್ದನೆಯ ಅಂಗಿ, ಪಂಚೆ (ಧೋತರ), ತಲೆಗೆ ಕೆಂಪು ಪೇಟ (ಪಟಗ) ನೊಸಲಲ್ಲಿ ತ್ರಿಪುಂಡ್ರ ಭಸ್ಮ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಪಾದಗಳಿಗೆ ಅರಿವೆಯ ಪಟ್ಟಿಕೆಯನ್ನು ಜೋಡಿಸಿದ ಕಟ್ಟಿಗೆಯ ಆವುಗೆಗಳು, ಕೈಯಲ್ಲಿ ಉದ್ದನೆಯ ಬೆತ್ತ ಇವು ಪುಟ್ಟರಾಜರ ವೇಷ ಭೂಷಣಗಳು. | |
| 16. | ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?<br>***ಉತ್ತರ :***<br>ಕೆಲವು ಹಕ್ಕಿಗಳಿಗೆ ವಿಪರೀತ ಅಲಂಕಾರ ಪ್ರಜ್ಞೆಯಿದೆ. ಅವು ವರ್ಣಮಯ ಹೂದಳವನ್ನೋ ಅಥವಾ ಹೊಳೆಯುವ ಕಲ್ಲುಗಳನ್ನೋ ಹೆಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚೂರು, ಬಟ್ಟೆಯ ಚಿಂದಿ ಮುಂತಾದವುಗಳನ್ನು ಗೂಡಿಗೆ ತರುತ್ತವೆ. ಅಮೆರಿಕಾದಲ್ಲಿ ಗ್ಯಾನೆಟ್ ಎಂಬ ಕಡಲಹಕ್ಕಿ ಗಾಲ್ಫ್ ಚೆಂಡು, ನೀಲಿ ಶೀಶೆಯ ಚೂರು. ಈರುಳ್ಳಿ ಸಿಪ್ಪೆ ಮತ್ತು ಸಣ್ಣ ಬೊಂಬೆಯೊಂದನ್ನು ತಂದು ಗೂಡನ್ನು ಅಲಂಕರಿಸಿತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?<br>*ಉತ್ತರ :*<br>ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವ್ಯಪರೀತ್ಯಗಳನ್ನು ಎದುರಿಸಲು ಗೂಡು ಬೇಕು. ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು ಗೂಡನ್ನು ನಿರ್ಮಿಸುತ್ತವೆ. | |
| 18. | ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ?<br>*ಉತ್ತರ :*<br>ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಒಂದಲ್ಲ ಒಂದು ತಕರಾರು. ಎಲ್ಲಾ ಕಡೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆಯೇ ಇಲ್ಲ ಮಕ್ಕಳು ಬೆಳೆಯುತ್ತಿದ್ದಾರೆ. ಅವರನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ ಹೀಗೆಲ್ಲ ತೊಂದರೆಗಳ ಸರಮಾಲೆಯನ್ನೇ ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತಾರರ ಬಳಿ ಹೇಳಿಕೊಳ್ಳುತ್ತಿದ್ದರು. | |
| 19. | ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ ?<br>*ಉತ್ತರ :*<br>ಥೇಮ್ಸ್ ನದಿಯ ಉತ್ತರಕ್ಕೆ ವ್ಯಾಪಾರಿಗಳು ಕಡಿಮೆ ಆದಾಯ ಹೊಂದಿದವರು ವಾಸಿಸುತ್ತಾರೆ. ದಕ್ಷಿಣಕ್ಕೆ ಉದ್ಯಮಗಳು. ಫ್ಯಾಕ್ಟರಿಗಳು ಹೆಚ್ಚಾಗಿ ರಾಜಕಾರಣಿಗಳು ಇರುತ್ತಾರೆ. ಥೇಮ್ಸ್ ನದಿಯ ದಂಡೆ ಬದಿಯಲ್ಲಿ ವಾಸಿಸುವವರು ಶ್ರೀಮಂತರು. | |
| 20. | ಟವರ್ ಆಫ್ ಲಂಡನ್‌ನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ?<br>*ಉತ್ತರ :*<br>ಲಂಡನ್ ಬ್ರಿಜ್‌ಗೆ ಹತ್ತಿರದಲ್ಲೇ ಟವರ್ ಆಫ್ ಲಂಡನ್ ಇದೆ. 3-4 ಅಂತಸ್ತಿನ ಚೌಕಾಕಾರದ ಈ ಬೃಹತ್ ಕಟ್ಟಡದ ಮೇಲೆ ಟವರ್‌ಗಳಿವೆ. ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸಿದ ಜಾಗ. ರಾಜಮನೆತನದಲ್ಲಿನ ವೈಷಮ್ಯ, ಅಸೂಯೆ, ಕೊಲೆ, ಸುಲಿಗೆಗಳ ತಾಣವಿದು. ರಾಬರ್ಟ್ ಕ್ಲೈವ್ 1757ರ ಪ್ಲಾಸೀ ಕದನದಲ್ಲಿ ವಶಪಡಿಸಿಕೊಂಡ ಶಸಾಸ್ತ್ರಗಳನ್ನು ಇಲ್ಲಿ ಇಡಲಾಗಿದೆಯಂತ ಇದು ನಿಗೂಢ ಸ್ಥಳ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು ?<br>***ಉತ್ತರ :***<br>ಬನದ ಗೋಪಾಲನ ತಲೆಯಲ್ಲಿ ಸಣ್ಣದೊಂದು ಕಿರೀಟವಿತ್ತು. ಆ ಕಿರೀಟದಲ್ಲಿ ಸುಂದರವಾದ ನವಿಲುಗರಿ ಶೋಭಿಸುತ್ತಿತ್ತು. ಕೈಯಲ್ಲೊಂದು ಕೊಳಲು ಹಿಡಿದಿದ್ದನು. ಮುಗುಳು ನಗುತ್ತ ಕೊಳಲನ್ನೂದುತ್ತ ನಿಂತಿದ್ದನು. | |
| 22. | ಮೇಲೇರಿದವರಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ ?<br>***ಉತ್ತರ :***<br>ಮೇಲೇರಿದವರಿಗೆ ನಾನು ಮೇಲೇರಿದ್ದೇನೆಂಬ ಹಮ್ಮು ಕರಗಬೇಕು. ಭೂಮಿ ಶಾಶ್ವತವೆಂಬ ಅರಿವು ಮೂಡಬೇಕು. ನಮ್ರತೆಯಿಂದ ಮೇಲೇರುವವರಿಗೆ ಏಣಿಯ ಮಹತ್ವ ಅರಿವಾಗುತ್ತದೆ. | |
| 23. | ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ ?<br>***ಉತ್ತರ :***<br>ಮೈಕೊಡವಿ ಎದ್ದ ಜಗತ್ತು, ಖಗ, ಪಕ್ಷಿ, ಪ್ರಾಣಿಗಳು ಲಗುಬಗೆಯಿಂದ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಂತೆ ಕಾಣುತ್ತದೆ. ಹೊಸ ಜೀವೋಲ್ಲಾಸದಿಂದ, ಚಿಗುರಿದ ಭಾವವಿಲಾಸದಿಂದ ನೆಲಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ. | |
| 24. | ಕರ್ಪೂರ ತನ್ನ ಕಲಸವನ್ನು ಹೇಗೆ ಪೂರೈಸುತ್ತದೆ ?<br>***ಉತ್ತರ :***<br>ದೀಪದ ಎದುರಲ್ಲಿ ಅಂಧಕಾರ ಸರಿದುಹೋಗುತ್ತದೆ. ಹಾಗೆಯೇ ತಟ್ಟೆಯಲ್ಲಿನ ಕರ್ಪೂರ ಶಾಂತಿಯಿಂದ ಬದುಕಿ. ಮೌನವಾಗಿ ಕರಗಿ ತನ್ನ ಕರ್ತವ್ಯವನ್ನು ಮುಗಿಸುತದೆ. | |
| 25. | ತುಂಬಿದ ಕುಣಿಗಲ್ ಕೆರೆ ನೋಡುಗರಿಗೆ ಹೇಗೆ ಕಾಣಿಸುತ್ತಿತ್ತು ?<br>***ಉತ್ತರ :***<br>ತುಂಬಿದ ಕುಣಿಗಲ್ ಕೆರೆಯು ನೋಡುಗರಿಗೆ ಒಂದು ವೈಭೋಗವೆಂಬಂತೆ ಇದೆ. ಸಂಜೆಯ ಬಾನಿನಲ್ಲಿ ತುಂಬಿದ ಕೆರೆಯಲ್ಲಿ ಚಂದ್ರಮ ಮೂಡಿ ಬಂದು ಸೊಬಗನ್ನು ಮೆರಗುಗೊಳಿಸುತ್ತದೆ. ಸಂತೆ ಹಾದಿಯಲ್ಲಿ ಸುಂದರ ಕಲ್ಲುಕಟ್ಟೆಯಿಂದ ಕೂಡಿದ, ಬಾಳೆಯ ಹಣ್ಣಿನಂತೆ ಬಾಗಿರುವ ಕುಣಿಗಲ್ ಕೆರೆಯು ನಿಂಬೆಯ ಹಣ್ಣಿನಂತೆ ತುಂಬಿಕೊಂಡು ನೋಡುಗರ ಕಣ್ಮನ ಸೆಳೆಯುವಂತೆ ಮಾಡುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?<br>***ಉತ್ತರ :***<br>ಕೇವಲ ಧಾರ್ಮಿಕ ಆಚರಣೆಗಳಿಂದ ಸರ್ವ ಸಮಾನತೆಯಿಂದ ಕೂಡಿದ ಸಮಾಜವನ್ನು ನಿರ್ಮಿಸಲು ಅಸಾಧ್ಯ. ಜನ ವಿಚಾರವಂತರಾಗಬೇಕು. ನೀರ ಕಂಡಲ್ಲಿ ಮುಳುಗುವುದು, ಮರವನ್ನು ಸುತ್ತುವುದು ಇಂತಹ ಮೂಢನಂಬಿಕೆಗಳನ್ನು ಕೈಬಿಟ್ಟು ಕಾಯಕ ತತ್ವವನ್ನು ಪಾಲಿಸಬೇಕು. ಆಗ ಮಾತ್ರ ವರ್ಣರಹಿತ, ವರ್ಗರಹಿತ ಸಮಾಜ ನಿರ್ಮಾಣ ಸಾಧ್ಯ ಎಂಬ ಆಶಯದಿಂದ ಬಸವಣ್ಣನವರು ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ. | |
| 27. | ಅರ್ಜುನನು ಒಡಲು ಒಡೆವಂತೆ ಮನದಲಿ ನಗಲು ಕಾರಣವೇನು ?<br>***ಉತ್ತರ :***<br>ಹೆಂಗಳೆಯರ ಮುಂದೆ ಜಂಭ ಕೊಚ್ಚಿಕೊಂಡ ಉತ್ತರಕುಮಾರ ಕೌರವರ ಸೈನ್ಯವನ್ನು ನೋಡಿದ ಮಾತ್ರಕ್ಕೇ ಭಯಭೀತನಾದನು. ಅಲ್ಲದೇ ಇಂತಹ ಮಹಾಸಾಗರದಂತೆ ಇರುವ ಸೈನ್ಯಕ್ಕೆ ಭೂತಾಯಿಯೇ ಜನ್ಮ ನೀಡಿರುವಳೇನೋ, ಇದನ್ನು ಗೆಲ್ಲಲು ಶಿವನಿಂದ ಮಾತ್ರ ಸಾಧ್ಯ ಎಂದು ರಥದಿಂದ ಜಿಗಿದು ಓಡಲು ಮುಂದಾದಾಗ ಅರ್ಜುನನು ಒಡಲು ಒಡೆವಂತೆ ನಕ್ಕನು. | |
| 28. | ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು ?<br>***ಉತ್ತರ :***<br>ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು. ಆದರೆ ಮನುಷ್ಯ ಸುಮ್ಮನೆ ಬಿಡುವನೆ ? ಅವನ ಆಸೆಯ ಹಾವು ಯಾರೂ ಕೆಣಕದಿದ್ದರೂ ಎಲ್ಲರನ್ನು ಕಡಿಯುವುದು. ಕಳ್ಳನನ್ನು ಮೊದಲು ಮಾಡಿ ಸಾಮ್ರಾಟನವರೆಗೆ ಎಲ್ಲರಿಗೂ ಆಸೆ. ಸ್ವಾರ್ಥ, ಲೋಭ ಕಳುವಾಗಿ ಹೋದ ಒಡವೆ ವಸ್ತುಗಳ ಲೋಭ ತನ್ನ ಹೆಂಡತಿ ರತ್ನಳಿಗೂ ಯಾಕೆ ಇರಬಾರದು ? ಎಂಬ ವಿಚಾರಗಳು ಮೂಡಿ ಬಂದವು. | |
| 29. | ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ ?<br>***ಉತ್ತರ :***<br>ತೆಂಗು, ತಾರೆಗಳ ನಾಡಿನಲ್ಲಿ ಜನರ ಶ್ರಮದಲ್ಲಿ ಜೀವಾಮೃತವಿದೆ. ತೆಂಗು, ಹೊಂಗೆ, ಬೇವು, ಹಿಪ್ಪೆಗಳ ಮೇಳ ನಡೆದು ಜೀವ ಹಿಂಡಿ, ಒಡಲ ಹಿಂಡಿ ತೈಲ ಧಾರೆಯಾಗಿ ಹೊಮ್ಮಿ ಬರಬೇಕು. ನಾಳೆಯೆಂಬ ಚಪ್ಪರದ ಕೆಳಗೆ ಮನುಕುಲದ ಮೊಳಕೆಯೊಡೆದು ಭವ್ಯ ಬದುಕು ಅರಳಬೇಕಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ನೀರ ಕಂಡಲ್ಲಿ ..........................................................<br>..............................................................................<br>..............................................................................<br>............................................... ಕೂಡಲ ಸಂಗಮದೇವ.<br>**ಅಥವಾ**<br>ಮರವಿದ್ದು ಫಲವೇನು ನೆಳಳಿಲ್ಲದನ್ನಕ್ಕ<br>..............................................................................<br>..............................................................................<br>..............................................................................<br>..............................................................................<br>.............................................................. ಮತ್ತೇರಿದೆ.<br>***ಉತ್ತರ :***<br>ನೀರ ಕಂಡಲ್ಲಿ ಮುಳುಗುವರಯ್ಯ<br>ಮರನ ಕಂಡಲ್ಲಿ ಸುತ್ತುವರಯ್ಯ<br>ಬತ್ತುವ ಜಲವ ಒಣಗುವ ಮರನ<br>ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲ ಸಂಗಮದೇವ<br>**ಅಥವಾ**<br>ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ<br>ಧನವಿದ್ದು ಫಲವೇನು ದಯವಿಲ್ಲದನ್ನಕ್ಕ<br>ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ<br>ರೂಪಿದ್ದು ಫಲವೇನು ಗಣವಿಲ್ಲದನ್ನಕ್ಕ<br>ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ<br>ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ – ಚೆನ್ನಮಲ್ಲಿಕಾರ್ಜುನ | $1 \times 3 = 3$ |
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

31. *ಅ.ರಾ. ಮಿತ್ರ :*

***ಉತ್ತರ :***

ಇವರ ಹೆಸರು ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ. ಇವರು ೧೯೩೫ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಗ್ರಾಮದಲ್ಲಿ ಜನಿಸಿದರು. ಖ್ಯಾತ ವಾಗ್ಮಿಗಳಾದ ಇವರು ಕನ್ನಡದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪಡೆದು ಉಪನ್ಯಾಸಕರಾಗಿ, ಬಳಿಕ ರೀಡರ್, ಪ್ರೊಫೆಸರ್ ಆಗಿ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು.

ಸಾಹಿತ್ಯ ಕ್ಷೇತ್ರದಲ್ಲಿ ಇವರ ಸಾಧನೆ ಅಸಾಮಾನ್ಯ. 'ಆರತಕ್ಷತೆ ಮತ್ತು ಇತರ ಪ್ರಬಂಧಗಳು', 'ಛಂದೋಮಿತ್ರ', 'ಕನ್ನಡ ಮೇಘದೂತ', 'ಮಹಾಭಾರತದ ಪಾತ್ರ–ಸಂಗತಿಗಳು', 'ವಚನಕಾರರು ಮತ್ತು ಶಬ್ದಕಲ್ಪ', 'ಒಳನೋಟಗಳು', 'ಕವಿಗಳ ಬೆನ್ನೇರಿ', 'ಕೈಲಾಸಂ ಬದುಕು–ಬರಹ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ 'ನವರತ್ನರಾಂ' ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಗೊರೂರು ಸಾಹಿತ್ಯ ಪ್ರಶಸ್ತಿ ಹಾಗೂ ಧರ್ಮಶ್ರೀ ಪ್ರಶಸ್ತಿಗಳು ಸಂದಿವೆ.

32. *ಎಂ. ಗೋಪಾಲಕೃಷ್ಣ ಅಡಿಗ :*

***ಉತ್ತರ :***

ಇವರು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿಯಲ್ಲಿ ೧೯೧೮ ರಲ್ಲಿ ಜನಿಸಿದರು.

ಇವರ ಕೃತಿಗಳು 'ಭಾವತರಂಗ', 'ಚಂಡೆಮದ್ದಳೆ', 'ಭೂಮಿ ಗೀತ', 'ನಡೆದುಬಂದ ದಾರಿ' ಮೊದಲಾದ ಕವನ ಸಂಕಲನಗಳನ್ನು, 'ಅನಾಥೆ', 'ಆಕಾಶ ದೀಪ' – ಎಂಬ ಎರಡು ಕಾದಂಬರಿಗಳನ್ನು ಅಡಿಗರು ರಚಿಸಿದ್ದಾರೆ.

ಅಡಿಗರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಆಕಾಡೆಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ಲಭಿಸಿವೆ.

ನವೋದಯದಿಂದ ನವ್ಯದ ಹಾದಿಯನ್ನು ಕನ್ನಡ ಸಾಹಿತ್ಯ ಹಿಡಿಯುತ್ತಿದ್ದ ಕಾಲದಲ್ಲಿ ನವ್ಯ ಪ್ರಕಾರದ ಪ್ರಸಿದ್ಧ ಕವಿಗಳಾಗಿ ಅಡಿಗರು ಬೆಳೆದರು. ಕುವೆಂಪು, ಬೇಂದ್ರ ಇವರಂಥ ಪ್ರಸಿದ್ಧ ಹಾಗೂ ಹಿರಿಯ ಕವಿಗಳ ಸಾಲಿನಲ್ಲಿ ಗುರುತಿಸಿಕೊಂಡವರು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 4 × 3 = 12 |
| | ಕೃತಿ, ಕರ್ತೃ, ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."<br>***ಉತ್ತರ :***<br>ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ. ಈ ವಾಕ್ಯವನ್ನು ಅ.ರಾ. ಮಿತ್ರ ಅವರು ಬರೆದ 'ಮಹಾಭಾರತದ ಪಾತ್ರ ಸಂಗತಿಗಳು' ಎಂಬ ಪುಸ್ತಕದ ಒಣಮರದ ಗಿಳಿ ಎಂಬ ಪಾಠದಿಂದ ಆರಿಸಲಾಗಿದೆ.<br>ಗಿಳಿಯು ಇಂದ್ರನಿಗೆ ಈ ಮಾತನ್ನು ಹೇಳಿತು. ಗಿಳಿಯ ಉಪಕಾರ ಸ್ಮರಣೆ, ತತ್ವನಿಷ್ಠೆಯನ್ನು ಮೆಚ್ಚಿಕೊಂಡ ಇಂದ್ರ ಗಿಳಿಯ ವರ್ತನೆ ಅಸಾಮಾನ್ಯವಾದುದು ಎಂದು ತಿಳಿದು ವರವನ್ನು ಕೊಡಲು ತೀರ್ಮಾನಿಸಿ ಏನಾದರೂ ವರವನ್ನು ಕೇಳು ಕೊಡುತ್ತೇನೆ ಎಂದಾಗ ಗಿಳಿಯು ಮರವನ್ನು ಹಸಿರಿನಿಂದ ನಳನಳಿಸಿ, ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರಕೊಡು. ಸುಖಸಂಪತ್ತಿನ ಕಾಲದಲ್ಲಿ ಜತೆಗಿದ್ದವರು ದುರ್ಭರ ಗಳಿಗೆಯಲ್ಲಿ ಕೂಡ ಜತೆಗಿರಬೇಕು, ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ ಎಂದು ಹೇಳಿದುದು ಈ ವಾಕ್ಯದ ಸ್ವಾರಸ್ಯ. | |
| 34. | ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.<br>***ಉತ್ತರ :***<br>ವ್ಯವಸಾಯ ಇಲದಿದ್ದರೆ ದೇಶದ ಆಟವೇ ನಡೆಯದು.<br>ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಬರೆದ 'ವ್ಯಕ್ತಿತ್ವ' ಪ್ರಬಂಧ ಸಂಕಲನದ ಅಸಿ, ಮಸಿ, ಕೃಷಿ ಎಂಬ ಲೇಖನದಿಂದ ಆರಿಸಲಾಗಿದೆ.<br>ಅಸಿ ಮಸಿಗಿಂತ ಮಹತ್ವವಾದದ್ದು ಕೃಷಿ ಎಂದು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕೃಷಿಕರೇನಾದರೂ ಸತ್ಯಾಗ್ರಹ ಮಾಡಿ ಒಂದು ವರ್ಷ ನಾವು ಬೆಳೆ ಬೆಳೆಯುವುದಿಲ್ಲ ಎಂದು ತೀರ್ಮಾನ ಮಾಡಿದರೆ ಗತಿಯೇನು ? ಯಾವ ಕಾರ್ಖಾನೆಯಿಂದಲೂ ಟೊಮೆಟೊ ಬೆಳೆಯಲು, ಅಕ್ಕಿ ತಯಾರಿಸಲು, ರಾಗಿ ಬೆಳೆಯಲು ಸಾಧ್ಯವಿಲ್ಲ. ಅದಕ್ಕೆಲ್ಲ ಭೂಮಿಯೇ ಬೇಕು. ವೈಜ್ಞಾನಿಕ ಬೆಳವಣಿಗೆ ಮಾತ್ರದಿಂದ ಬದುಕಲು ಸಾಧ್ಯವಿಲ್ಲ ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ. | |
| 35. | ಗೊತ್ತು ಗುರಿಯು ಇಲ್ಲದೆ ಕತ್ತಲಲ್ಲಿ ನಡೆದನು.<br>***ಉತ್ತರ :***<br>ಗೊತ್ತು ಗುರಿಯು ಇಲ್ಲದೆ ಕತ್ತಲಲ್ಲಿ ನಡೆದನು. ಈ ವಾಕ್ಯವನ್ನು ಬಸವರಾಜ ಸಬರದ ಅವರು ಬರೆದ. 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದ 'ಬೋಧಿವೃಕ್ಷದ ಹಾಡು' ಎಂಬ ಕವನದಿಂದ ಆರಿಸಿದೆ.<br>ಸಿದ್ದಾರ್ಥನು ಗೃಹಸ್ಥ ಜೀವನವನ್ನು ತ್ಯಜಿಸಿ ಹೋಗುವ ಸಂದರ್ಭದಲ್ಲಿ ಈ ಮಾತುಬಂದಿದೆ. ಲೌಕಿಕ ಸುಖಭೋಗಗಳಿಂದ ಜೀವನದ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತ ಸಿದ್ಧಾರ್ಥನು, ದೃಢವಾದ ನಿರ್ಧಾರ ಮಾಡಿ ಮಡದಿ ಮಗುವನ್ನು ತೊರೆದು ಅಡವಿಯ ದಾರಿಯನ್ನು ಹಿಡಿದನು. ಅರಮನೆಯ ಮೋಹವನ್ನು ಹರಿದು ಹಾಕಿದನು. ಯಾವ ಬಂಧನವೂ ಇಲ್ಲದೆ ಗುರಿಯ ಸಾಧನೆಗಾಗಿ, ಕತ್ತಲಲ್ಲಿ ಬೆಳಕನ್ನು ಹುಡುಕುತ್ತ ಹೊರಟನು ಎಂಬುದು ಈ ವಾಕ್ಯದ ಸ್ವಾರಸ್ಯ. | |
| 36. | ಒಂದು ಜೀವನಕೇಕೆ ಹಲವು ಸಾಧ್ಯಗಳು ?<br>***ಉತ್ತರ :***<br>ಒಂದು ಜೀವನಕೇಕೆ ಹಲವು ಸಾಧ್ಯಗಳು. ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದ ಸಮಗ್ರ ಕಾವ್ಯ ಕೃತಿಯ ಗುರಿ ಎಂಬ ಪದ್ಯದಿಂದ ಆರಿಸಿದೆ.<br>ಮನುಷ್ಯನಿಗೆ ನಿಶ್ಚಿತವಾದ ಒಂದೇ ಗುರಿಯಿರಬೇಕು ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಒಂದು ಬಾಣಕ್ಕೆ ಒಂದೇ ಗುರಿಯಿರಲು ಸಾಧ್ಯ, ಒಂದು ದೇಹದಲ್ಲಿ ಆತ್ಮ ಒಂದೇ ಇರಲು ಸಾಧ್ಯ. ಹಾಗಾಗಿ ಹಲವಾರು ಗುರಿಗಳನ್ನು ಇಟ್ಟುಕೊಂಡು ಅವುಗಳನ್ನು ಈಡೇರಿಸಲು ಕಷ್ಟಸಾಧ್ಯ. ಆದ್ದರಿಂದ ಒಂದೇ ಹೆಗ್ಗುರಿಯಿಂದ ಹಗಲು ಇರುಳು ಹೋರಾಡಿ ಜಯಿಸಬೇಕು ಎಂಬುದು ಈ ಮಾತಿನ ಸ್ವಾರಸ್ಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ಹೇಗೆ ನಿಜವಾಗಿದೆ ಎಂಬುದನ್ನು ವಿವರಿಸಿ.<br>**ಅಥವಾ**<br>ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ವಿವರಿಸಿ.<br>***ಉತ್ತರ :***<br>ಪುಟ್ಟರಾಜರು ಸಾಮಾನ್ಯ ಕುಟುಂಬದಲ್ಲಿ ರೇವಣ್ಣಯ್ಯ ಮತ್ತು ಸಿದ್ದಮ್ಮ ದಂಪತಿಗಳ ಮಗನಾಗಿ ಜನಿಸಿದರು. ಜನಿಸಿದ ಆರು ತಿಂಗಳಿನಲ್ಲಿಯೇ ಕಣ್ಣು ಬೇನೆಯಿಂದ ದೃಷ್ಟಿಯನ್ನು ಕಳೆದುಕೊಂಡರು. ಮಾವನ ಆಶ್ರಯದಲ್ಲಿ ಬೆಳೆದ ಇವರ ಸಂಗೀತದ ಆಸಕ್ತಿಯನ್ನು ಗಮನಿಸಿ ಪಂಡಿತ ಪಂಚಾಕ್ಷರಿ ಗವಾಯಿಗಳಲ್ಲಿ ಶಿಷ್ಯತ್ವ ಕೊಡಿಸಿದರು. ತಾನೊಬ್ಬ ಅಂಧ ಬಾಲಕ ತನ್ನಿಂದ ಏನು ಸಾಧಿಸಲು ಸಾಧ್ಯ ? ಎಂದು ಇದ್ದಷ್ಟು ದಿನ ಗುರುಸೇವೆ ಮಾಡುತ್ತ ಊಟ ಸಿಕ್ಕಲ್ಲಿ ಹೊಟ್ಟೆ ಹೊರೆದು, ನೆಲ ಸಿಕ್ಕಲ್ಲಿ ಶಯನಗೈದು ಈ ಬದುಕನ್ನು ಮುಗಿಸಿದರಾಯಿತು ಎಂಬ ವಿಷಣ್ಣ ಭಾವದಲ್ಲಿ ಇರುತ್ತಿರಲಿಲ್ಲ. ಗುರುಗಳನ್ನು ಅನುಸರಿಸಬೇಕು. ಅವರ ನಡೆಯೇ ಮಂತ್ರ ಅವರ ನುಡಿಯೇ ಆಚಾರ ಎಂದು ನಿರ್ಧರಿಸಿದ ಎಂಟು ವರ್ಷದ ಬಾಲಕ ಪುಟ್ಟಯ್ಯ ಬಲುಬೇಗ ಗುರುಗಳು ಹೇಳಿದ ಪಾಠವನ್ನು ಗ್ರಹಿಸಿ, ಕಲಿತುಕೊಂಡರು. ಶಿಷ್ಯನ ಅಭಿಲಾಷೆಗೆ ತಕ್ಕಂತೆ ಶ್ರೇಷ್ಠ ಗುರುಗಳ ಸಾನಿಧ್ಯದಿಂದ ಸಂಗೀತ ಜ್ಞಾನದೊಂದಿಗೆ ವಿವಿಧ ಶಾಸ್ತ್ರ ಗ್ರಂಥಗಳ ಅಧ್ಯಯನ ಮಾಡಿದರು. ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ದಾನುಶಾಸ್ತ್ರ, ಛಂದಶಾಸ್ತ್ರ, ಕನ್ನಡ ವ್ಯಾಕರಣವನ್ನು ಶಾಸ್ತ್ರಬದ್ಧವಾಗಿ ಕಲಿತರು. ನಿಷ್ಣಾತರಾದರು. ಸ್ವತಂತ್ರವಾಗಿ ಓದು, ಬರಹ ಮಾಡಲು ಬ್ರೈಲ್ ಲಿಪಿಯನ್ನು ಕಲಿತು ಪಾರಂಗತರಾದರು. ಗಾಂಧಿ ತತ್ವಾನುಯಾಯಿಗಳಾದ ಇವರು ಖಾದಿ ಬಟ್ಟೆಯನ್ನು ಧರಿಸುವುದರ ಮೂಲಕ ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸಿದರು.<br>ಪುಟ್ಟರಾಜರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಗಳಿಸುವುದರೊಂದಿಗೆ ಗಾಯನ, ವಾದನ, ಸಾಹಿತ್ಯ, ಕೀರ್ತನೆ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಜ್ಞಾನಯೋಗಿ, ಗಾನಯೋಗಿ ಎಂದು ಪ್ರಸಿದ್ಧರಾದರು. ಅವರು ಕನ್ನಡ, ಹಿಂದಿ, ಸಂಸ್ಕೃತ ಮೂರೂ ಭಾಷೆಗಳಲ್ಲಿ 75 ಕ್ಕೂ ಅಧಿಕ ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು. ಅವರ ಸಾಧನೆಗೆ ನಾಡೋಜ, ಬಸವಶ್ರೀ, ಪದ್ಮಭೂಷಣ, ಗೌರವ ಡಾಕ್ಟರೇಟ್ ಮುಂತಾದ ಗೌರವ ಪ್ರಶಸ್ತಿಗಳು ಸಾಲುಗಟ್ಟಿ ಬಂದವು. ಇದನ್ನೆಲ್ಲ ನೋಡಿದಾಗ ದೇಹದ ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ.

**ಅಥವಾ**

ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಂ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಹಾರ್ಮೋನಿಯಂನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಮಾವ ಮನೆಯ ಹೊರಗೆ. ಒಳಗೆ ಜನರ ಗುಂಪು ಕಂಡು ಆಶ್ಚರ್ಯ ಚಕಿತರಾಗಿ, ಹಾರ್ಮೋನಿಯಂ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡು ನಿಬ್ಬೆರಗಾದರು.

ಮಾವನ ಪಾದ ಸಪ್ಪಳದಿಂದ ವಿಚಲಿತನಾದ ಬಾಲಕ ಒಮ್ಮೆಲೆ ಹಾರ್ಮೋನಿಯಂ ನುಡಿಸುವುದನ್ನು ನಿಲ್ಲಿಸಿ. 'ನನ್ನನ್ನು ಕ್ಷಮಿಸು ತಪ್ಪಾತು, ನೀನು ಮುಟ್ಟು ಎಂದರೂ ನಾನು ಇನ್ನೆಂದೂ ನಿನ್ನ ಹಾರ್ಮೋನಿಯಂ ಮುಟ್ಟುವುದಿಲ್ಲ ಎನ್ನುತ್ತ ಮಾವನ ಪಾದಗಳಿಗೆ ತಡವಡಿಸಿದನು. ಆಗತಾನೆ ಹಾಡಲು ಕಲಿತ ಮರಿ ಕೋಗಿಲೆಯಂತೆ ಕೆನ್ನೆಯ ಮೇಲೆ ಕಣ್ಣೀರು ಸುರಿಸುತ್ತಲಿದ್ದ ಬಾಲಕನನ್ನು ಮಾವ ಬಿಗಿಯಾಗಿ ಅಪ್ಪಿಕೊಂಡು "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ ಅದು ನಿನ್ನದು ನಿನ್ನ ಆಸ್ತಿ" ಎಂದರು. ಹೀಗೆ ಬಾಲಕ ಹಾರ್ಮೋನಿಯಂ ನುಡಿಸಿದ ಪ್ರಸಂಗ ಅವರ ಸಂಗೀತ ಮಾತ್ರವಲ್ಲದೆ ಹಲವಾರು ಕ್ಷೇತ್ರಗಳ ಸಾಧನೆಗೆ ನಾಂದಿಯಾಯಿತು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಅರ್ಜುನ ಮತ್ತು ಉತ್ತರ ಈರ್ವರಲ್ಲಿರುವ ನಿಮ್ಮ ಮೆಚ್ಚಿನ ಸ್ವಭಾವಗಳನ್ನು ವಿವರಿಸಿ.<br>**ಅಥವಾ**<br>ಅರ್ಜುನ ಮತ್ತು ಉತ್ತರನ ಸಂಭಾಷಣೆಯಲ್ಲಿ ನಿಮ್ಮ ಮೆಚ್ಚಿನ ಅಂಶಗಳನ್ನು ಸ್ವಾರಸ್ಯಕರವಾಗಿ ವಿವರಿಸಿ.<br>***ಉತ್ತರ :***<br>ಮಹಾಭಾರತದಲ್ಲಿ 'ಉತ್ತರನ ಪೌರುಷ' ಒಂದು ಸ್ವಾರಸ್ಯಕರ ಪ್ರಸಂಗ. ಶೌರ್ಯವಿಲ್ಲದೆ ಬಡಾಯಿ ಕೊಚ್ಚಿಕೊಳ್ಳುವವರನ್ನು ಉತ್ತರಕುಮಾರರೆಂದು ಕರೆಯುತ್ತಾರೆ. ಉತ್ತರಕುಮಾರನು ತನ್ನ ಸಾಮರ್ಥ್ಯಕ್ಕೆ ತಕ್ಕನಾದ ಒಳ್ಳೆಯ ಸಾರಥಿ ಸಿಕ್ಕಿದ್ದರೆ ಕುರು ಸೈನ್ಯವನ್ನು ಬಗ್ಗು ಬಡಿದು ಗೋವುಗಳನ್ನು ಬಿಡಿಸಿ ತರುತ್ತಿದ್ದೆ ಎಂದು ಹೆಂಗಳೆಯರ ಮುಂದೆ ಜಂಭ ಕೊಚ್ಚಿಕೊಳ್ಳುತ್ತಾನೆ. ಆದರೆ ಕೌರವರ ಸೈನ್ಯವನ್ನು ನೋಡಿ ಹೆದರಿ ರಥದಿಂದ ಇಳಿದು ಓಡಲು ಯತ್ನಿಸುತ್ತಾನೆ. ಬರಿಯ ಬಾಯ ಬಡಿವಾರ ತೋರಿ ನಗೆ ಪಾಟಲಿಗೆ ಒಳಗಾಗುತ್ತಾನೆ. ಆದರೆ ಬೃಹನ್ನಳೆಯ ವೇಷದಲ್ಲಿರುವ ಅರ್ಜುನ ಶೌರ್ಯವನ್ನು ತೋರಿ ರಥವನ್ನು ಶತ್ರುಸೈನ್ಯದ ಮುಂದೆ ತಂದು ನಿಲ್ಲಿಸಿ ರಣರಂಗದಿಂದ ಹೇಡಿಯ ಹಾಗೆ ಓಡಿಹೋಗುತ್ತಿದ್ದ ಉತ್ತರಕುಮಾರನನ್ನು ಹಿಡಿದು ತಂದು ಅವನಲ್ಲಿ ಧೈರ್ಯವನ್ನು ತುಂಬಿ ತಾನೇ ಯುದ್ಧಕ್ಕೆ ನಿಲ್ಲುತ್ತಾನೆ. ನಗೆಪಾಟಲಿಗೆ ಒಳಗಾದ ಉತರನಿಗಿಂತ, ರಣರಂಗದಲ್ಲಿ ಶೂರನಾಗಿ ಹೋರಾಡುವ ಅರ್ಜುನನ ಗುಣ ಸ್ವಭಾವಗಳು ಮೆಚ್ಚುಗೆಯಾಗುತ್ತವೆ.<br>**ಅಥವಾ**<br>ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನನು ಉತ್ತರನ ಸಾರಥಿಯಾಗಿ ರಥವನ್ನು ರಣರಂಗಕ್ಕೆ ತಂದು ನಿಲ್ಲಿಸಿದನು. ಒಮ್ಮೆಲೇ ಕೌರವರ ಮಹಾಸಾಗರದಂಥ ಸೈನ್ಯವನ್ನು ಕಂಡು ಉತರನು ಭಯಭೀತನಾಗಿ, ಈ ಮಹಾ ಸೈನ್ಯಕ್ಕೆ ಭೂಮಿತಾಯಿಯೇ ಜನ್ಮ ನೀಡಿರುವಳೋ ಏನೋ ? ಈ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸೇನೆಯೊಂದಿಗೆ ಶಿವನಿಗೆ ಮಾತ್ರ ಯುದ್ಧ ಮಾಡಿ ಗೆಲ್ಲಲು ಸಾಧ್ಯ ಎಂದಾಗ ಅರ್ಜುನನು ರಥವನ್ನು ಕೌರವರ ಸೇನೆಯ ಸಮೀಪಕ್ಕೆ ತಂದನು. ಈ ಸಾರಥಿಯು ತನ್ನನ್ನು ಕೊಂದೇ ಬಿಡುತ್ತಾನೆ ಎಂಬಂತೆ ಮೆಲ್ಲಗೆ ರಥದ ಹಿಂಬದಿಯಿಂದ ಜಿಗಿದು ಬದುಕಿದೆ ಎಂದು ನಿಟ್ಟುಸಿರು ಬಿಡುತ್ತ ಓಡಲಾರಂಭಿಸಿದನು. ಇದನ್ನು ಕಂಡ ಅರ್ಜುನನು ಉತ್ತರನನ್ನು ಕೈಹಿಡಿದು ಎಳೆದು ತಂದು ರಥದಲ್ಲಿ ಕುಳ್ಳಿರಿಸಿ ಈ ರೀತಿಯಾಗಿ ಗದರಿದನು. "ಎಲಾ ಉತ್ತರನೇ, ಅರಮನೆಯಲ್ಲಿರುವಾಗ ಸಭೆಯಲ್ಲಿ ನಾರಿಯರ ಮುಂದೆ ಬಾಯಿಗೆ ಬಂದಂತೆ ಜಂಭ ಕೊಚ್ಚಿಕೊಂಡೆ. ಈಗೇನಾಯಿತು ? ಶತ್ರುಸೈನ್ಯದೊಂದಿಗೆ ಹೋರಾಡುವುದನ್ನು ಬಿಟ್ಟು ನಾಡನರಿಯಂತೆ ಓಡಿ ಹೋಗುತ್ತಿರುವೆ. ಈಗ ನನ್ನನ್ನು ನೋಡಿ ಹಲ್ಲುಕಿರಿದರೆ ಸುಮ್ಮನೆ ಬಿಡುವೆನೆ ? ನಡೆ ಯುದ್ಧ ಮಾಡು" ಎಂದು ಪಟ್ಟುಹಿಡಿದನು.<br><br>ಯುದ್ಧಭೂಮಿಯಿಂದ ಪಲಾಯನಗೈದ ಪಾಪವನ್ನು ಯಜ್ಞಯಾಗಾದಿಗಳಿಂದ ಪರಿಹರಿಸಿಕೊಳ್ಳಬಹುದು. ತನಗೆ ಇಂದ್ರಪದವಿಯೂ ಬೇಡ. ದೇವಲೋಕದ ಅಪ್ಸರೆಯರೂ ಬೇಡ ಅರಮನೆಯ ನಾರಿಯರೇ ಸಾಕು. ಅರಸುತನವೇ ಇಂದ್ರಪದವಿ. ತನ್ನನ್ನು ಕಳುಹು ಎಂದು ಉತ್ತರನು ಪರಿಪರಿಯಾಗಿ ಅಂಗಲಾಚಿದನು. | |
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| | 'ಚಿಪ್ಕೋ' ಎಂಬುದು ಹಿಂದಿ ಭಾಷೆಯ ಪದ. ಈ ಪದದ ಅರ್ಥ ಅಪ್ಪಿಕೋ, ತಬ್ಬಿಕೋ. 'ಚಿಪ್ಕೋ' ಚಳುವಳಿ ಪ್ರಾರಂಭವಾದದ್ದು 1973 ರಲ್ಲಿ 'ಮಂಡಲ್' ಎಂಬ ಗ್ರಾಮದಲ್ಲಿ. ಮಂಡಲ್ ಗ್ರಾಮದ ಸುತ್ತಮುತ್ತ ಅರಣ್ಯವಿದೆ. ಅರಣ್ಯ ಕಡಿಯಲು ಸರ್ಕಾರ ನಿರ್ಬಂಧ ಹೇರಿತ್ತು. ಆದರೂ ಅಲಹಾಬಾದಿನ ಆಟಿಕೆಗಳ ತಯಾರಕ ಮರಗಳನ್ನು ಕಡಿಯಲು ಅನುಮತಿಯನ್ನು ಪಡೆದು ಕಂಟ್ರಾಕ್ಟರ್‌ನೊಂದಿಗೆ ಬಂದ. ಗ್ರಾಮಸ್ಥರು ವಿರೋಧಿಸಿದರೂ ಕೇಳಲಿಲ್ಲ. ಇದರಿಂದ ಯೋಚಿಸಿದ ಜನ ಒಟ್ಟಾಗಿ ಸೇರಿ ಗುರುತು ಮಾಡಿದ್ದ ಮರಗಳನ್ನೆಲ್ಲ ತಬ್ಬಿಕೊಂಡು ನಿಂತರು. ಮರ ಕತ್ತರಿಸುವ ಮೊದಲು ನಮ್ಮನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕತ್ತರಿಸಿ ಎಂದರು. ಕಂಟ್ರಾಕ್ಟರ್ ಅನಿವಾರ್ಯವಾಗಿ ಹಿಂದಿರುಗಬೇಕಾಯಿತು. ಅವರೇ ಮುಂದೆ 'ರೇನಿ' ಎಂಬ ಹಳ್ಳಿಗೆ ಬಂದರು. ಮರ ಕಡಿಯುವ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದ ಮಹಿಳೆಯರೇ ಮುಂದಾಗಿ ಐವತ್ತು ವರ್ಷದ ಅನಕ್ಷರಸ್ಥ ಮಹಿಳೆ ಗೌರಾದೇವಿಯ ನೇತೃತ್ವದಲ್ಲಿ ಮರ ಕಡಿಯುವುದನ್ನು ತಡೆದರು. 1970 ರಲ್ಲಿ ಅಲಕನಂದಾ ಕಣಿವೆಯ ಪ್ರದೇಶದಲ್ಲಿ ಭೀಕರ ಸ್ವರೂಪದ ಪ್ರವಾಹ ಸಂಭವಿಸಿತ್ತು. ಅರಣ್ಯದ ಮಣ್ಣೆಲ್ಲ ಕೊಚ್ಚಿಕೊಂಡು ಹೋಗಿ ಹೊಳೆ, ಕೆರೆ, ಕಣಿವೆಗಳಲ್ಲಿ ಹೂಳು ತುಂಬಿಕೊಂಡು ಕುಡಿಯುವ ನೀರಿಗೆ ಪರದಾಡುವ ಸ್ಥಿತಿ ನಿರ್ಮಾಣವಾಯಿತು. ಇದಕ್ಕೆಲ್ಲ ಕಾರಣ ಅರಣ್ಯನಾಶವೇ ಎಂಬುದು ಜನಕ್ಕೆ ಅರಿವಾಯಿತು. ಹೀಗೆ ಅರಣ್ಯ ಸಂರಕ್ಷಣೆಯ ಬಗ್ಗೆ ಹಳ್ಳಿಹಳ್ಳಿಗೆ ತೆರಳಿ ಅರಿವು ಮೂಡಿಸಿದ ಜನಪ್ರಿಯ ನಾಯಕ ಸುಂದರಲಾಲ್ ಬಹುಗುಣರವರು. | |
| 39. | ಮರ ಕಡಿಯಲು ಸರ್ಕಾರದಿಂದ ಅನುಮತಿಯನ್ನು ಪಡೆದವರು ಯಾರು ?<br>***ಉತ್ತರ :***<br>ಮರ ಕಡಿಯಲು ಸರ್ಕಾರದಿಂದ ಅನುಮತಿಯನ್ನು ಪಡೆದವರು ಅಲಹಾಬಾದಿನ ಆಟಿಕೆಗಳ ತಯಾರಕರು. | |
| 40. | ಮರ ಕಡಿಯಲು ಬಂದ ಕಂಟ್ರಾಕ್ಟರ್‌ಗೆ ಗ್ರಾಮಸ್ಥರ ಉತ್ತರವೇನು ?<br>***ಉತ್ತರ :***<br>ಮರ ಕಡಿಯಲು ಬಂದ ಕಂಟ್ರಾಕ್ಟರ್‌ಗೆ ಜನ ಮರ ಕತ್ತರಿಸುವ ಮೊದಲು ನಮ್ಮನ್ನು ಕತ್ತರಿಸಿ ಎಂದರು. | |
| 41. | ಅಲಕನಂದಾ ಕಣಿವೆ ಪ್ರದೇಶದಲ್ಲಿ ಸಂಭವಿಸಿದ ಪ್ರವಾಹದ ಪರಿಣಾಮವೇನು ?<br>***ಉತ್ತರ :***<br>ಅರಣ್ಯದ ಮಣ್ಣೆಲ್ಲ ಕೊಚ್ಚಿಕೊಂಡು ಹೋಗಿ ಹೊಳೆ, ಕೆರೆ, ಕಣಿವೆಗಳಲ್ಲಿ ಹೂಳು ತುಂಬಿಕೊಂಡು ಕುಡಿಯುವ ನೀರಿಗೆ ಪರದಾಡುವ ಸ್ಥಿತಿ ನಿರ್ಮಾಣವಾಯಿತು. | |
| 42. | ಚಿಪ್ಕೋ ಚಳುವಳಿಯಲ್ಲಿ ಭಾಗವಹಿಸಿದ ಇಬ್ಬರ ಹೆಸರನ್ನು ತಿಳಿಸಿ.<br>***ಉತ್ತರ :***<br>ಚಿಪ್ಕೋ ಚಳುವಳಿಯಲ್ಲಿ ಭಾಗವಹಿಸಿದವರು ಸುಂದರಲಾಲ್ ಬಹುಗುಣರವರು ಮತ್ತು ಅನಕ್ಷರಸ್ಥ ಮಹಿಳೆ ಗೌರಾದೇವಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 43. | 'ತತ್ಸಮ' ರೂಪದಲ್ಲಿರುವ ಪದ<br>(ಎ) ಪಕ್ಷಿ (ಬಿ) ಸಿರಿ<br>(ಸಿ) ಜನುಮ (ಡಿ) ಮಲ್ಲಿಗೆ<br>***ಉತ್ತರ :*** (ಎ) ಪಕ್ಷಿ | |
| 44. | 'ಬುನಾದಿ' ಪದದ ಅರ್ಥ<br>(ಎ) ಸೊಕ್ಕು (ಬಿ) ತಳಪಾಯ<br>(ಸಿ) ತುಡಿತ (ಡಿ) ಅವಸ್ಥೆ<br>***ಉತ್ತರ :*** (ಬಿ) ತಳಪಾಯ | |
| 45. | 'ಸರ್ವನಾಮ' ಪದಕ್ಕೆ ಉದಾಹರಣೆ<br>(ಎ) ಗಂಗಾ (ಬಿ) ಅವಳು<br>(ಸಿ) ವಿಜ್ಞಾನಿ (ಡಿ) ಬೆಟ್ಟ<br>***ಉತ್ತರ :*** (ಬಿ) ಅವಳು | |
| 46. | 'ಮೇಲೇಳು' ಪದದಲ್ಲಿರುವ ಸಂಧಿ<br>(ಎ) ಲೋಪ ಸಂಧಿ (ಬಿ) ಆಗಮ ಸಂಧಿ<br>(ಸಿ) ಆದೇಶ ಸಂಧಿ (ಡಿ) ಗುಣ ಸಂಧಿ<br>***ಉತ್ತರ :*** (ಎ) ಲೋಪ ಸಂಧಿ | |
| 47. | 'ಕ್ರಿಯಾ ಸಮಾಸ'ಕ್ಕೆ ಉದಾಹರಣೆ<br>(ಎ) ಹೊಸರಾಗ (ಬಿ) ಗಿಡಮರ<br>(ಸಿ) ಗಂಜಿಯುಂಡು (ಡಿ) ಅರಮನೆ<br>***ಉತ್ತರ :*** (ಸಿ) ಗಂಜಿಯುಂಡು | |
| 48. | 'ಜೋಡು ನುಡಿಗೆ' ಉದಾಹರಣೆ<br>(ಎ) ಬನ್ನಿಬನ್ನಿ (ಬಿ) ಕಟ್ಟಕಡೆ<br>(ಸಿ) ಸಿಹಿಕಹಿ (ಡಿ) ಪಟಪಟ<br>***ಉತ್ತರ :*** (ಸಿ) ಸಿಹಿಕಹಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 49. | ವಿಜಾತಿಯ ಸಂಯುಕ್ತಾಕ್ಷರ ಪದವಿದು<br>(ಎ) ಅಮ್ಮ (ಬಿ) ಅಣ್ಣ<br>(ಸಿ) ಕಣ್ಣು (ಡಿ) ಕಷ್ಟ<br>***ಉತ್ತರ :*** (ಡಿ) ಕಷ್ಟ | |
| 50. | ಚತುರ್ಥಿ ವಿಭಕ್ತಿ ಪ್ರತ್ಯಯವುಳ್ಳ ಪದ<br>(ಎ) ಮರವು (ಬಿ) ಮರವನ್ನು<br>(ಸಿ) ಮರದಿಂದ (ಡಿ) ಮರಕ್ಕೆ<br>***ಉತ್ತರ :*** (ಡಿ) ಮರಕ್ಕೆ | |
| 51. | ವಿರುದ್ಧಾರ್ಥಕ ರೂಪದಲ್ಲಿರುವ ಪದ<br>(ಎ) ಅಜ್ಞಾನ (ಬಿ) ಸುರಕ್ಷಿತ<br>(ಸಿ) ಸಾಧಾರಣ (ಡಿ) ಶಾಶ್ವತ<br>***ಉತ್ತರ :*** (ಎ) ಅಜ್ಞಾನ | |
| 52. | 'ದಿಗ್ವಾಚಕ'ಕ್ಕೆ ಉದಾಹರಣೆಯಾಗಿರುವ ಪದ<br>(ಎ) ಪಶ್ಚಿಮ (ಬಿ) ಇಬ್ಬರು<br>(ಸಿ) ಎಂತಹ (ಡಿ) ಬಿಳುಪು<br>***ಉತ್ತರ :*** (ಎ) ಪಶ್ಚಿಮ | |
| 53. | ಐದು ಮಾತ್ರೆಗಳಿಂದ ಕೂಡಿರುವ ಪದ<br>(ಎ) ಗಮಕ (ಬಿ) ಅರಮನೆ<br>(ಸಿ) ಉತ್ತರ (ಡಿ) ಮಂಡೆಯಲಿ<br>***ಉತ್ತರ :*** (ಡಿ) ಮಂಡೆಯಲಿ | |
| 54. | 'ಉಪಮಾಲಂಕಾರ'ಕ್ಕೆ ಉದಾಹರಣೆ<br>(ಎ) ವನಜಮುಖಿ (ಬಿ) ಬಲಗಡಲು<br>(ಸಿ) ನಾಡನರಿ (ಡಿ) ಕಮಲದಂತೆ ಮುಖ<br>***ಉತ್ತರ :*** (ಡಿ) ಕಮಲದಂತೆ ಮುಖ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| 55. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | * ಆಳಾಗಿ ದುಡಿಯುವವನು ಅರಸನಾಗಬಲ್ಲ | |
| | * ಬೆಳೆಯುವ ಸಿರಿ ಮೊಳಕೆಯಲ್ಲಿ | |
| | * ದೇಶ ಸುತ್ತಿ ನೋಡು; ಕೋಶ ಓದಿ ನೋಡು | |
| | ***ಉತ್ತರ :*** | |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 56. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ನಿಮ್ಮನ್ನು ಮಂಗಳೂರಿನ ಸಂತಮೇರಿ ಪ್ರೌಢಶಾಲೆಯ 'ಸಹನಾ' ಎಂದು ಭಾವಿಸಿಕೊಂಡು, ಶಾಲಾ ಗ್ರಂಥಾಲಯಕ್ಕೆ ಕನ್ನಡ ಪದಕೋಶ ಗ್ರಂಥವನ್ನು ತರಿಸುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಬೆಂಗಳೂರಿನ ಬಸವನಗುಡಿಯಲ್ಲಿ ವಾಸವಾಗಿರುವ 'ಶಿವಕುಮಾರ' ಎಂದು ಭಾವಿಸಿಕೊಂಡು, ಗಣೇಶೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ದಾವಣಗೆರೆಯ ಬಾಪೂಜಿ ನಗರದಲ್ಲಿ ವಾಸವಿರುವ ರಮೇಶ ಎಂಬ ಹೆಸರಿನ ಗೆಳೆಯನಿಗೆ ಒಂದು ಪತ್ರ ಬರೆಯಿರಿ. | |
| | ***ಉತ್ತರ :*** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | * ಪರಿಸರ ಸಂರಕ್ಷಣೆ | |
| | * ರಾಷ್ಟ್ರೀಯ ಭಾವೈಕ್ಯತೆ | |
| | * ಕಂಪ್ಯೂಟರ್ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |